doc-505
T-P-2

Reg No B G 155 11 11 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವಾತಂತ್ರ್ಯ
ಮಹೋತ್ಸವ
ಸಂರಂಭೀರಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು. ಆರಮನೆ ಪರಸ್ಥಾದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ವರ್ಮಸ್ಥ ಚಾರಿಸಂತ ಎಂ ಎಸ್. ಕೃಷ್ಣರಾವ್ [2 ಪೈಸೆ

ಮದರಾಸಿನಲ್ಲಿ ಅಣ್ಣಾ ಡಿ ಎಂ ಕೆ ಯ ಭಾರಿ ಮೆರವಣಿಗೆ

ಶಾಂತಿ ಮೆರವಣಿಗೆ

ಹೈದರಾಬಾದು— ಮುಲ್ಕಿ ನಿಬಂಧನೆ ಬಗ್ಗೆ ಚಳವಳಿ ಹೆಚ್ಚಾಗಿರುವ ಭಾಗಗಳಲ್ಲಿ ತಾ॥ 12ರಿಂದ ಶಾಂತಿ ಮೆರವಣಿಗೆಯನ್ನು ನಡೆಸಲು ಇಲ್ಲಿಯ ಸರ್ವೋದಯ ಮಂಡಲಿ ನಿರ್ಧರಿಸಿದೆ.

○

ಬೆಲೆ ತಕ್ಕುದಾಗಿಲ್ಲ

ಕೃಷ್ಣರಾಜನಗರ— ಇಲ್ಲಿಯ ರೈತರು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರಿಗೂ ಲೋಕೋಪಯೋಗಿ ಮಂತ್ರಿ ಶ್ರೀ ಚನ್ನಬಸಪ್ಪನವರಿಗೂ, ನಿಷ್ಕರ್ಷಿಸಿರುವ ಭತ್ತದ ಬೆಲೆ ತಕ್ಕಷ್ಟಾಗಿಲ್ಲವೆಂದು ಮನವಿ ಮಾಡಿರುವರು.

★

ಸಕ್ಕರೆ ಬಿಡುಗಡೆ

ನವದೆಹಲಿ— ಮುಂದಿನ ತಿಂಗಳಿಗೆ 2.75 ಲಕ್ಷ ಟನ್ ಸಕ್ಕರೆ ಬಿಡುಗಡೆಗೆ ಸರಕಾರ ಸಕ್ಕರೆ ಗಿರಣಿಗಳಿಗೆ ಆಜ್ಞೆ ಮಾಡಿದೆ ; ಈ ಪೈಕಿ 1.85 ಲಕ್ಷ ಟನ್ ಲೆವಿ ಸಕ್ಕರೆಯಾಗಿ ಮಹಾರಾಷ್ಟ್ರಕ್ಕೂ 0.90 ಲಕ್ಷ ಟನ್ ನಿರ್ಬಂಧ ಮುಕ್ತವಾಗಿ ಉತ್ತರ ಪ್ರದೇಶಕ್ಕೂ ಲಭಿಸಿದೆ

○

ನ್ಯೂಯಾರ್ಕ್‌ನಲ್ಲಿ ಹಿಂದೂ ದೇವಾಲಯ

ನ್ಯೂಯಾರ್ಕ್— ಇಲ್ಲಿ ಹಿಂದೂ ದೇವಾಲಯದ ನಿರ್ಮಾಣ ಕಾರ್ಯದ ಎಡಪಡೆ ನೇ ಹಂತಕ್ಕಾಗಿ ಹಣಸಂಗ್ರಹ ಕಾರ್ಯವು ಅಕ್ಟೋಬರ್ 21 ರಂದ ಪ್ರಸಿದ್ಧ ನರ್ತಕಿ ಕಮಲಾರಾಣಿ ಭರತನಾಟ್ಯ ಪ್ರದರ್ಶನದಿಂದ ಪ್ರಾರಂಭವಾಯಿತು — ಉತ್ತರ ಅಮೇರಿಕ ಹಿಂದೂ ಮಂದಿರ ಸೊಸೈಟಿಯು ಧನ ಸಂಗ್ರಹ ಮಾಡುತ್ತಿದೆ — ಶ್ರೀ ಪಂಚಾನುಜೈ ಸ್ವಾಮಿಗಳವರ ಮಾರ್ಗದರ್ಶನದಲ್ಲಿ ಹಿಂದೂ ಮಂದಿರ ಸೊಸೈಟಿಯು [illegible] ಮಂದಿರವನ್ನು ನಿರ್ಮಾಣದ ಯೋಜನೆಯನ್ನು ರೂಪಿಸಿದೆ ಎಂದು ಕಾರ್ಯದರ್ಶಿ ಶ್ರೀ ನರಸಿಂಹ ಹೇಳಿದರು.

ಭೂಸುಧಾರಣೆ

ಬೆಂಗಳೂರು— ಶಾಸನಸಭಾ ಕಾಂಗ್ರೆಸ್ ಪಾರ್ಟಿ ಏರ್ಪಡಿಸಿದ್ದ ಭೂಸುಧಾರಣಾ ತಿದ್ದುಪಡಿ ಸಂಬಂಧದ ಸಭೆಯಲ್ಲಿ 20 ಮಂದಿ ರಾಜ್ಯದ ಪಾರ್ಲಿಮೆಂಟು ಸದಸ್ಯರು ಮಂತ್ರಿಗಳೂ ಇದ್ದರು — ಭೂಪರಿಮಿತಿ ಬಗ್ಗೆ ಅವರಲ್ಲಿ ಭಿನ್ನಾಭಿಪ್ರಾಯವಿದ್ದಿ ಕೆಲವರು ಈಗ ನಿಷ್ಕರ್ಷಿಸಿರುವದು ಸರಿಯೆಂದೂ, ಕೆಲವರು ಇನ್ನೂ ಕಡಮೆಯಾಗಬೇಕೆಂದೂ, ಕೆಲವರು ಇನ್ನೂ ಹೆಚ್ಚಾಗಬೇಕೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು ಭೂಮಾಲೀಕರು ವಾಸಿಸುವ ದೂರ ಮತ್ತು ಅವರ ಆದಾಯ ವಿಷಯ ತೆಗೆದುಹಾಕಬೇಕೆಂದೂ ಅಭಿಪ್ರಾಯಪಟ್ಟರೆಂದೂ ಗೊತ್ತಾಗಿದೆ.

○

ಆರಣ್ಯ ಸಂಪತ್ತು

ಭಾರತದಲ್ಲಿ 750 ಲಕ್ಷ ಹೆಕ್ಟರುಗಳಿಗೂ ಹೆಚ್ಚಿನ ವಿಸ್ತೀರ್ಣದ ಅರಣ್ಯಗಳಿವೆ. ಇವು ದೇಶದ ಒಟ್ಟು ಭೂಪ್ರದೇಶದಲ್ಲಿ ಶೇಕಡ 23 ರಷ್ಟು ವಿಸ್ತೀರ್ಣವನ್ನು ಆಕ್ರಮಿಸಿಕೊಂಡಿವೆ — ರಾಷ್ಟ್ರೀಯ ಅರಣ್ಯಗಳಲ್ಲಿ ಸಧ್ಯದಲ್ಲಿ 15000 ಬಗೆಯ ಗಿಡಗಳು, 2000 ಬಗೆಯ ಪಕ್ಷಿಗಳು, 500 ಬಗೆಯ ಸಸ್ತನಿ ವರ್ಗದ ಪ್ರಾಣಿಗಳು, 30000 ಬಗೆಯ ವಿವಿಧ ಕೀಟಗಳು, ನಿವಾಸನ್ನು ಹೋಲುವ ಇತರ ಸ್ಥಳ ಜಲ ಪ್ರಾಣಿಗಳು ಕಂಡುಬರುತ್ತವೆ.

★

ವಿವಾಹ ಮಹೋತ್ಸವ

ಪ್ರೌ॥ ನಿರ್ಮಲ (ರಿಟೈರ್ಡ್ ಸ್ಟೇನೋ ಟೈಪಿಸ್ಟ್ ಶ್ರೀ ವಿ ಶ್ರೀನಿವಾಸರಾವ್‌ರವರ ಪುತ್ರಿ) ಮತ್ತು ಚಿ॥ ವಿ. ಶಂಕರ್ (ದಿ॥ ಚೌಬೀನಿ ವ್ಯಾಪಾರಿಗಳು ಬಿ ವಿ ನಂಜುಂಡಯ್ಯನವರ ಪುತ್ರ) ಇವರ ವಿವಾಹ ಮಹೋತ್ಸವವು ನಿನ್ನೆ ವೈಭವವಾಗಿ ನೆರವೇರಿತು.

ವಿದ್ಯಾರ್ಥಿಗಳ ಆಕ್ರಮಣ ಕಾರ್ಯ

ಲಕ್ನೋ— ವಿದ್ಯಾರ್ಥಿಗಳ ಚಳವಳಿ ಸಂಬಂಧದಲ್ಲಿ ಮುಚ್ಚಲಾಗಿದ್ದ ವಿಶ್ವವಿದ್ಯಾನಿಲಯದ ಕಚೇರಿಗಳು ತೆರೆಯಲ್ಪಟ್ಟಾಗ, ಕುಪಿತ ವಿದ್ಯಾರ್ಥಿ ನಾಯಕರು ಅವುಗಳನ್ನು ಆಕ್ರಮಿಸಿದರು.

★

ಅಣ್ಣಾ ಡಿಎಂಕೆ ಮೆರವಣಿಗೆ

ಮದರಾಸು— ಅಣ್ಣಾ ಡಿಎಂಕೆ ಬಹು ಭಾರಿ ಮೆರವಣಿಗೆಯೊಂದನ್ನು ಎಂ. ಜಿ. ಆರ್. ನೇತೃತ್ವದಲ್ಲಿ ನಿನ್ನೆ ನಡೆಯಿತು — ಮೆರವಣಿಗೆಗಾರರು ಮುಖ್ಯಮಂತ್ರಿ, ಕರುಣಾನಿಧಿಯವರ ರಾಜೀನಾಮೆ ಪೋಲೀಸರ ದಬ್ಬಾಳಿಕೆಯ ಸ್ಮತಿಭಟನೆಗೆ ಘೋಷಣೆ ಕೂಗುತ್ತಿದ್ದರು — ಮೌಂಟ್‌ರೋಡಿನಲ್ಲಿ ಅಣ್ಣಾ ಪ್ರತಿಮೆಗೆ ಹಾರಹಾಕಲು ಅಲ್ಲಿ ಸಂಚಾರಿ ಏಣಿ ಇರಲಿಲ್ಲವಾಗಿ ರಾಮಚಂದ್ರನ್‌ರವರ ಕೈಯಿಂದ ಒಬ್ಬ ಸ್ವಯಂಸೇವಕನನ್ನು ಗುಲಾಬಿ ಹೂವಿನ ಹಾರವನ್ನು ತೆಗೆದುಕೊಂಡು ಮೆಟ್ಟಿಲುಗಳನ್ನು ಹತ್ತಿ ಪ್ರತಿಮೆಗೆ ಹಾರ ಹಾಕಿದಾಗ ಹರ್ಷೋದ್ಗಾರ ಮಾಡಲಾಯಿತು ; ಈ ಅಣ್ಣಾ ಪ್ರತಿಮೆಯು 1968 ರಲ್ಲಿ ತಮಿಳು ಸಮ್ಮೇಳನ ಕಾಲದಲ್ಲಿ ಶ್ರೀ ರಾಮಚಂದ್ರರೇ ಉದಾರ ದಾನ ಮಾಡಿದುದಾಗಿದೆ — ಮೆರವಣಿಗೆಲ್ಲೂ ಮೆರವಣಿಗೆಯಲ್ಲೂ ಮೆರವಣಿಗೆ ನೋಡಲೂ ಲಕ್ಷಾಂತರ ಜನರಿದ್ದರು — ರಾಜಭವನಕ್ಕೆ ಸ್ವಲ್ಪ ದೂರದಲ್ಲಿ ಪೋಲೀಸರು ಮೆರವಣಿಗೆ ತಡೆದರು ; ನಂತರ ಹತ್ತು ಮಂದಿಯ ನಿಯೋಗವು ಗೌರ್ನರರನ್ನು ಕಂಡು, ಕರುಣಾನಿಧಿಯವರ ರಾಜೀನಾಮೆಗೂ ಪೋಲೀಸರ ದಬ್ಬಾಳಿಕೆ ನಿಲ್ಲಲೂ ಮನವಿ ಮಾಡಿದರು.

ತಾ॥ 15 ರಂದು ತಮಿಳುನಾಡು ಬಂದ್ ನಡೆಯಲಾಗುವುದು.

● ಮೈಸೂರು ಜಿಲ್ಲೆಯಲ್ಲಿ ಅಕ್ಟೋಬರು ಕಡೆಯವರಿಗೆ ಮನೆ ಇಲ್ಲದವರಿಗೆ 15386 ನಿವೇಶನಗಳು ಹಂಚಲಾಗಿವೆ.

ಸಂಪ್ರದಾಯದ ಉಡುಪು

ನವದೆಹಲಿ— ಭೂತಾನಿನವರು ಭೂತಾನಿ ಸಂಪ್ರದಾಯದ ಉಡುಪನ್ನು ಧರಿಸಬೇಕೆಂದೂ ಕಡ್ಡಾಯವಾಗಿ ಉಡುಪನ್ನು ಧರಿಸಕೂಡದೆಂದೂ ಭೂತಾನ್ ಗೃಹಮಂತ್ರಿಯವರು ಆಜ್ಞೆ ಹೊರಡಿಸಿರುವರು.

★

ವ್ಯವಸ್ಥೆಯಾಗಲಿಲ್ಲ

ಲಾಹೋರು— ಕಾಶ್ಮೀರ ಸಮರ ಸ್ತಂಭ ಗುರ್ತಿಸುವ ವಿಷಯದಲ್ಲಿ ಎರಡು ದೇಶಗಳ ಮಿಲಿಟರಿ ಅಧಿಕಾರಿಗಳಲ್ಲಿ ಒಪ್ಪಿತವಾಗದಿರುವುದರಿಂದ ಅವರು ತಮ್ಮತಮ್ಮ ಸರಕಾರದ ಮುಂದೆ ಈ ಸಮಸ್ಯೆ ಇಡಲಿರುವರು.

★

ಪುನರ್ಜನ್ಮ

ನವದೆಹಲಿ— ಭಾರತೀಯ ಸಿದ್ಧಾಂತವಾದ ಪುನರ್ಜನ್ಮವು ವಾಸ್ತವಿಕ ಸಂಗತಿ ಎಂದು ಅಮೇರಿಕದ ವರ್ಜಿನಿಯಾ ವಿಶ್ವವಿದ್ಯಾನಿಲಯದ ಡಾ॥ ಇಯಾನ್ ಸ್ಟೀವರ್ಸನ್ ಇಲ್ಲಿ ಘೋಷಿಸಿದ್ದಾರೆ ; ವಿಶ್ವದಾದ್ಯಂತ ಪುನರ್ಜನ್ಮ ಸ್ಮರಣೆಯ ಸುಮಾರು 1200 ಪ್ರಸಂಗಗಳ ಆಧಾರದಿಂದ ಅವರು ತಮ್ಮ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ.

★

ಸಾದರ ಸ್ವೀಕಾರ

ಬೆಳಗಾವಿನ ಖ್ಯಾತ ದ್ವೈವಾರಪತ್ರಿಕೆ "ಸಂದೇಶ" ದ ದೀಪಾವಳಿ ಸಂಚಿಕೆಯನ್ನು ಸಾದರದಿಂದ ಸ್ವೀಕರಿಸಿದ್ದೇವೆ. ಈ ಸಂಚಿಕೆಯಲ್ಲಿ ಮನೋಲ್ಲಾಸಕರವಾದ ಕಥೆಗಳೂ ಲೇಖನಗಳೂ ಲೇಖನಗಳೂ ಜೊತೆಗೆ ವರ್ಷ ಭವಿಷ್ಯವೂ ಇದ್ದು ದೀಪಾವಳಿಯ ಸಾಹಿತ್ಯ ರಸದೂಟದಂತಿದೆ.

● ಬೆಂಗಳೂರು— ಪಣ್ಣು ಉಳಿತಾಯ ಚಳವಳಿಯನ್ನು ಗ್ರಾಮಾಂತರಗಳಲ್ಲಿ ಸರಕಾರಿ ಮತ್ತು ಖಾಸಗಿ ಸಂಸ್ಥೆಗಳು ಹರಡಬೇಕೆಂದು ಅರ್ಥಮಂತ್ರಿ ಶ್ರೀ ಘೋರ್ಪಡೆಯವರು ಈ ಬಗ್ಗೆ ಚಳವಳಿ ಉದ್ಘಾಟಿಸುತ್ತಾ ಹೇಳಿದರು.

ದನಗಳ ಹಿತಕಾರ್ಯ

ಗುಲ್ಬರ್ಗ— ದನಕರುಗಳನ್ನು ಜಿಲ್ಲೆಯಿಂದ ಹೊರಗೆ ತರಲು ಮತ್ತು ದನಗಳ ಶಿಬಿರಗಳನ್ನು ಸ್ಥಾಪಿಸಲೂ ಸರಕಾರ ರೂ. 5 ಲಕ್ಷ ನಿಗದಿಮಾಡಿದೆಯೆಂದೂ, ಬೆಳಗಾಂ ಅರಣ್ಯಗಳಿಗೆ ಸಾಗಿಸಲಾಗುವುದೆಂದೂ ಘೋಷಿಸಿದೆ.

ಪರಿಹಾರ ಕಾರ್ಯ

ಬೆಳಗಾಂ— ರಾಜ್ಯ ಸರಕಾರ ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅನಾವೃಷ್ಟಿ ಪೀಡಿತ ಭಾಗಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ರೂ. 2 6 ಕೋಟಿ ಖರ್ಚುಮಾಡಿದೆಯೆಂದೂ, ಈ ಕಾರ್ಯಗಳನ್ನು ನಿಲ್ಲಿಸುವುದಿಲ್ಲವೆಂದೂ ಚೀಫ್ ಸೆಕ್ರೆಟರಿ ಶ್ರೀ ರೋಬೆಲ್ಲೋ ಹೇಳಿದರು.

ಮಾನಭಂಗ

ಸ್ಪೇರೋಬಿ— ಹೊರದೂಡಲ್ಪಟ್ಟ ಏಸ್ಯನ್ನರ ಕಡೇ ಸ್ಪೆಷಲ್ ರೈಲಿನಲ್ಲಿ ಯುಗಾಂಡಾ ಬಿಟ್ಟುಬಂದ 4 ಯುವತಿಯರು ಕೆನ್ಯಾಕ್ಕೆ ಬಂದಾಗ, ಮಾರ್ಗದಲ್ಲಿ ಯುಗಾಂಡಾ ಸೈನಿಕರು ತಮ್ಮ ಮಾನಭಂಗ ಮಾಡಿದರೆಂದು ಹೇಳಿದರು

ವುಡ್‌ಲಾಂಡ್ಸ್ ಅಮೋಘ 6 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೆರಾ 5 ನೇ ವಾರ

ಬಾಂಧವ್ಯ

ಪಾತ್ರ – ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ,
ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ – ಹುಡುಗ

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 12-11-72 ಭಾನುವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ	ಶ್ರೀ ಸಿದ್ಧಾರ್ಥ ಮತ್ತು ವಾದ್ಯಗೋಷ್ಠಿ, ಮೈಸೂರು	ವಾದ್ಯಗೋಷ್ಠಿ
7 ರಿಂದ 9-30	ಕರ್ನಾಟಕ ಕಲಾ ಸಂಘ, ಮೈಸೂರು (ಅರುಣ ಕುಮಾರ್, ರಂಗ ಮತ್ತು ವೃಂದ)	ವಿಶೇಷ ನಾಟಕ "ಮಗಳ ಮದುವೆ" ಅಥವಾ "ಕಂಕಣಬಲ"

ಜೀವನರಂಜನಾ ಕಟ್ಟೆ

6 ರಿಂದ 7	ಶ್ರೀ ಟಿ. ಸಿ. ಬ್ಯಾಟರಾಯಪ್ಪ, ಮೈಸೂರು	ಸಂಗೀತ
7 ರಿಂದ 8	ಶ್ರೀಮತಿ ಕೆ. ಜಿ. ಗೀತ, ಮೈಸೂರು	ಸಂಗೀತ
8 ರಿಂದ 9-30	ಶ್ರೀ ಬಿ. ಎಸ್. ರಾಧಾಕೃಷ್ಣ, ಬೆಂಗಳೂರು	ಸಂಗೀತ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 13-11-1972 ಸೋಮವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ	ಮಾಸ್ಟರ್ ಎಂ. ಎಸ್. ಜಾನಕಿರಾಂ ಮತ್ತು ವೃಂದ, ಮೈಸೂರು	ಎಲೆಕ್ಟ್ರಿಕ್ ಮ್ಯಾಂಡಲಿನ್
7 ರಿಂದ 9-30	ಶ್ರೀ ಏನಗಿ ಬಾಳಪ್ಪ, ಬೆಳಗಾಂ	ವಿಶೇಷ ನಾಟಕ "ಮಾವ ಬಂದನಪ್ಪೋ ಮಾವ"

ಜೀವನರಂಜನಾ ಕಟ್ಟೆ

6 ರಿಂದ 7	ಶ್ರೀ ಎಂ ಹೆಚ್. ಅಂಜನಪ್ಪ, ಮೈಸೂರು	ಸಂಗೀತ
7 ರಿಂದ 8	ಶ್ರೀ ವೀರಭದ್ರಯ್ಯ, ಮೈಸೂರು	ನಾದ ಮೇಳ
8 ರಿಂದ 9-30	ಶ್ರೀ ಎಂ. ಕೃಷ್ಣಪ್ಪ, ಮೈಸೂರು	ವಾದ್ಯಗೋಷ್ಠಿ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

Edited Printedand Published by Dharmapracharanirata M S Krishna Rao (Propretor) at the Satyavadi Press, Chamarajepuram Mysore